

ಬಗೆಯಲ್ಲಿ ನಾವೆಲ್ಲ ಕಸ ಉತ್ಪಾದಿಸುತ್ತಲೇ ಇದ್ದೇವೆ. ಕೊಳ್ಳುಬಾಕ ಸಂಸ್ಕೃತಿಯ ಜೊತೆಗೆ ಸಿರಿವಂತರವೂ ಜೊತೆಯಾಗಿ ಬೇಕಾದ್ದು ಬೇಡವಾದದ್ದನ್ನೆಲ್ಲ ಗುಡ್ಡೆ ಹಾಕಿಕೊಳ್ಳುತ್ತೇವೆ, ಅದನ್ನು ಬೀದಿಗೆ ಕಸವಾಗಿಸುತ್ತೇವೆ. ಆ ಕಸವನ್ನು ಸಮರ್ಪಕವಾಗಿ ವಿಲೇವಾರಿಯಾದರೂ ಮಾಡುತ್ತೇವೆಯೇ ಎಂದರೆ, ಅಲ್ಲಿಯೂ ಬೇಜವಾಬ್ದಾರಿಯೇ. ಇದರ ಪರಿಣಾಮವಾಗಿ ಮನೆಗಳಿಂದ ಮೋರಿಗಳ ಮೂಲಕ ಹರಿದುಬರುವ ಕಸದ ತ್ಯಾಜ್ಯ ರಾಜಕಾಲುವೆಗಳನ್ನು ಸೇರಿ, ಅಲ್ಲಿ ಕಸದ ಗುಡ್ಡೆಗಳು ರೂಪುಗೊಂಡು ಕಾಲುವೆಗಳ ಗಂಟಲು ಕಟ್ಟಿಕೊಳ್ಳತೊಡಗುತ್ತದೆ. ರಾಜಕಾಲುವೆಗಳು ಇರುವುದು ನೀರು ಹರಿಯಲಿಕ್ಕೇ ಹೊರತು, ಘನ ತ್ಯಾಜ್ಯಗಳ ಹರಿವಿಗೆ ಅಲ್ಲ ಎನ್ನುವ ಸಾಮಾನ್ಯ ಜ್ಞಾನವನ್ನು ಅನುಷ್ಠಾನಕ್ಕೆ ತರುವಲ್ಲಿನ ನಿರ್ಲಕ್ಷ್ಯವೇ ಮಳೆ ನೀರು ಮನೆಗಳಿಗೆ ನುಗ್ಗಲಿಕ್ಕೆ ಒಂದು ಕಾರಣವೂ ಆಗಿದೆ.

ಪ್ಲಾಸ್ಟಿಕ್ ಆಧುನಿಕ ಜಗತ್ತಿನ ಬಹು ದೊಡ್ಡ ಸಮಸ್ಯೆಗಳಲ್ಲೊಂದು. ನಾಶಪಡಿಸಲು ಸಾಧ್ಯವಾಗದೆ, ಮಣ್ಣಿನಲ್ಲಿ ಉಳಿದುಬಿಡುವ ಪ್ಲಾಸ್ಟಿಕ್ ಪರಿಸರವನ್ನು ವಿಷಮಯಗೊಳಿಸುತ್ತದೆ. ಈ ಸತ್ಯ ತಿಳಿದಿದ್ದರೂ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸುವುದು ನಮಗೆ ಸಾಧ್ಯವಾಗಿಲ್ಲ. ತೆಳು ಪ್ಲಾಸ್ಟಿಕ್ ಚೀಲಗಳ ಬಳಕೆ ಮತ್ತು ತಯಾರಿಕೆಗೆ ನಿರ್ಬಂಧವಿದೆ. ಆದರೆ, ನಿಷೇಧಗೊಂಡ ಪ್ಲಾಸ್ಟಿಕ್ ಕವರ್‌ಗಳ ಬಳಕೆ ದೊಡ್ಡ ಪ್ರಮಾಣದಲ್ಲಿ ನಡೆದೇ ಇದೆ. ಇಡ್ಲಿ ತಯಾರಿಕೆ ಸೇರಿದಂತೆ ಆಹಾರ ಪದಾರ್ಥಗಳ ಪ್ಯಾಕಿಂಗ್‌ಗೆ ಕೆಲವು ಹೋಟೆಲ್‌ಗಳಲ್ಲಿ ಪ್ಲಾಸ್ಟಿಕ್ ಬಳಕೆ ನಡೆದೇ ಇದೆ. ಇದಕ್ಕೆ ಯಾರನ್ನು ದೂರುವುದು? ಹಾನಿಕಾರಕ ಪ್ಲಾಸ್ಟಿಕ್ ನಿಷೇಧಿಸುವ ಸರ್ಕಾರವೇ ಅದರ ಉತ್ಪಾದನೆಯನ್ನು ಕಣ್ಣು ಮುಚ್ಚಿಕೊಂಡು ಸಹಿಸಿಕೊಂಡಿದೆ. ಆರೋಗ್ಯಕ್ಕೆ ಹಾನಿಕಾರಕ ಎಂದು ತಿಳಿದಿದ್ದರೂ ಆಹಾರ ಉತ್ಪಾದಕರು ಪ್ಲಾಸ್ಟಿಕ್ ಬಳಸುತ್ತಿದ್ದಾರೆ. ಜನಸಾಮಾನ್ಯರು ಕೂಡ ಪ್ಲಾಸ್ಟಿಕ್ ಬಳಕೆಯನ್ನು ಅನಿವಾರ್ಯ ಎಂದು ಒಪ್ಪಿಕೊಂಡಿರುವಂತಿದೆ. ಹೊಣೆಗಾರಿಕೆಯ ಚಕ್ರದಲ್ಲಿ ಎಲ್ಲ ಕೊಂಡಿಗಳೂ ಸಡಿಲವಾಗಿರುವ ಸಂದರ್ಭವಿದು.

## ಕೆರೆಗಳ ಕಣ್ಮರೆಯ ದುರಂತ ಕಾವ್ಯ

ಕೆರೆಗಳ ಕಥೆಯಂತೂ ಕರುಣಾಜನಕ. 'ಕಥೆ ಹೇಳುವೆ ನನ್ನ ಕಥೆ ಹೇಳುವೆ' ಎಂದು ಕೆರೆಗಳೇನಾದರೂ ತಮ್ಮ ಅಳಲು ತೋಡಿಕೊಳ್ಳಲು ಮುಂದಾದರೆ, ಆ ದುರಂತ ಮಹಾಕಾವ್ಯಗಳನ್ನು ಲಿಪಿಗಿಳಿಸುವಲ್ಲಿ ಗಣೇಶನೂ ಸೋಲುವುದು ನಿಶ್ಚಿತ.

ಕೆರೆಗಳೆಲ್ಲ ಬಡಾವಣೆಗಳಾಗಿ ಬದಲಾಗಿವೆ. ನಗರ ನಾಗರಿಕತೆಗೆ ಕೆರೆಗಳೇ ಹಾರ. ಅಳಿದುಳಿದ ಕೆರೆಗಳನ್ನು ಕೊಳಚೆಗುಂಡಿಗಳಾಗಿಸಿದ್ದೇವೆ. ನಗರಗಳಿಗೆ ಹೊಂದಿಕೊಂಡ ನದಿಗಳಲ್ಲೀಗ ನೀರು ಹರಿಯುತ್ತಿಲ್ಲ. ಮನುಷ್ಯನ ಮಲಮೂತ್ರಗಳೇ ನೀರಾಗಿ ಹರಿಯುತ್ತಿದೆ. ಕಾರ್ಕೋಟಕದ ಜೊತೆಗೆ ಹಾಲಾಹಲ ಸೇರಿದಂತೆ ಮಲಮೂತ್ರದೊಂದಿಗೆ ಕಾರ್ಖಾನೆಗಳ ಕಲ್ಮಶಗಳೂ ನದಿಯ ಹರಿವಿಗೆ ಕೂಡಿಕೊಳ್ಳುತ್ತಿವೆ. ಹಾಲಾಹಲವೇ ನದಿಗಳ ರೂಪದಲ್ಲಿ ಹರಿಯುತ್ತಿದೆ.

ಬೆಂಗಳೂರು ಹಿಂದೊಮ್ಮೆ ಕೆರೆಗಳ ಊರಾಗಿತ್ತು. ಚಿಕ್ಕ, ಮಧ್ಯಮ ಹಾಗೂ ಬೃಹತ್ ಗಾತ್ರದವು ಸೇರಿದಂತೆ ಬೆಂಗಳೂರಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕೆರೆಗಳಿದ್ದವು ಎಂದು ಅಧ್ಯಯನಗಳು ಹೇಳುತ್ತವೆ. 1960ರ ಸುಮಾರಿನಲ್ಲಿ ರಾಜಧಾನಿಯ ಸುತ್ತಮುತ್ತ 280ಕ್ಕೂ ಹೆಚ್ಚು ಕೆರೆಗಳಿದ್ದವು ಎನ್ನುವ ಲೆಕ್ಕಾಚಾರವಿದೆ. ಈಗ? ಈಗಲೂ ಐವತ್ತರ ಆಸುಪಾಸಿನಷ್ಟು ಕೆರೆಗಳು ಬೆಂಗಳೂರಿನಲ್ಲಿ ಉಳಿದಿವೆ. ನೂರು ಎಕರೆಗೂ ಹೆಚ್ಚಿನ ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಮಡಿವಾಳ ಕೆರೆಯಂತಹ ಬೃಹತ್ ನೀರತಾವುಗಳಿನ್ನೂ ಬೆಂಗಳೂರಿನಲ್ಲಿ ಉಳಿದುಕೊಂಡಿವೆ.

ಬೆಂಗಳೂರಿನಲ್ಲಿ ಕೆಲವು ಕೆರೆಗಳೇನೋ ಉಳಿದುಕೊಂಡಿವೆ. ಆದರೆ, ಆ ಕೆರೆಗಳ ಸ್ಥಿತಿಗತಿ ಹೇಗಿದೆ? ಕೆರೆಗಳ ಒತ್ತುವರಿ ನಡೆದೇ ಇದೆ. ಕೆಲವು ಕೆರೆಗಳನ್ನು ಕೊಳಚೆಗುಂಡಿಗಳಾಗಿಸಿಕೊಂಡಿದ್ದೇವೆ. ಕೆರೆಗೆ ಬರಬೇಕಿದ್ದ ನೀರಮಾರ್ಗಗಳಲ್ಲಿ ಮನೆಗಳು ರೂಪುಗೊಂಡಿವೆ. ಇದರಿಂದಾಗಿ, ಕೆರೆ ತುಂಬುವುದು ಕಷ್ಟ ಎನ್ನುವಂತಾಗಿದೆ. ಕೆರೆಗಳಲ್ಲಿ ಹೂಳು ತುಂಬಿಕೊಂಡಿರುವುದರಿಂದ ಅವುಗಳ ನೀರು ಸಂಗ್ರಹ ಸಾಮರ್ಥ್ಯವೂ ಕ್ಷೀಣಿಸಿದೆ. ಹೀಗೆ, ಕೆರೆಗಳನ್ನು ಹಾಳಾಗಲು ಬಿಟ್ಟ ಆಡಳಿತ, ಬೆಂಗಳೂರು ಮಹಾನಗರಕ್ಕೆ ನೀರು ಒದಗಿಸಲು